ದಿಃ 23.07.2026

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 473/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಂತೋಷ | ಪ್ರಾ.ಸಾಃ 2 |
| ತಂದೆಯ/ಗಂಡನ ಹೆಸರು | : | ನಾಗಪ್ಪ | ಚಾಸಾಃ 3 |
| ವಯಸ್ಸು | : | 42 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ಗಾಂಧಿನಗರ, ಚನ್ನಗಿರಿ | ದಿಃ23.07.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಚಾಸಾ.1 ರವರು ಗೊತ್ತಿಲ್ಲ, ಚಾಸಾ.2 ರವರು ಗೊತ್ತು. ಸಾಕ್ಷಿ ನಿಪಿ.1 ರ ಮಹಜರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಾನು ಮತ್ತು ಚಾಸಾ.2 ರವರು ಬೈಕಿನಲ್ಲಿ ಬರುತ್ತಿದ್ದಾಗ, ಪೊಲೀಸರು ಆರ್.ಗೊಲ್ಲರಹಳ್ಳಿಯ ಬಳಿ ರಸ್ತೆಯ ಪಕ್ಕದ ಜಮೀನಿನಲ್ಲಿ ಮಹಜರಿಗೆ ಬಂದಿದ್ದೇವೆ ಎಂದು ಹೇಳಿ ನನ್ನ ಸಹಿಯನ್ನು ಪಡೆದರು. ಮಹಜರಿಗೆ ದಿ.22.07.2023 ರಂದು ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡಿದಾಗ ಬೆಳಗ್ಗೆ 10.00 ರಿಂದ 11 ಗಂಟೆ ಆಗಿತ್ತು. ಸದರಿ ಸಮಯದಲ್ಲಿ ನನ್ನೊಂದಿಗೆ ಚಾಸಾ.2, ಜಮೀನಿನವರು ಮತ್ತು ಪೊಲೀಸರು ಇದ್ದರು. ಸಾಕ್ಷಿ ಮಹಜರಿನ ಕಾಲಕ್ಕೆ ತೆಗೆದ ನಿಪಿ.2 ರ ಛಾಯಾಚಿತ್ರದಲ್ಲಿ ತನ್ನ ಮತ್ತು ಚಾಸಾ.2 ಮತ್ತು ಜಮೀನಿನವರನ್ನು ನೋಡಿ ಗುರುತಿಸಿರುತ್ತಾರೆ. ಸ್ಥಳ ಮಹಜರನ್ನು ಜರುಗಿಸಿಲು ಪೊಲೀಸರಿಗೆ ಸ್ಥಳವನ್ನು ಯಾರು ತೋರಿಸಿದ್ದರು ಎಂದು ಗೊತ್ತಿಲ್ಲ. ಮಹಜರಿನ ಸಮಯದಲ್ಲಿ ಪೊಲೀಸರು ಕೋಲನ್ನು ಅಮಾನತ್ತುಪಡಿಸಿಕೊಂಡರು. ಸಾಕ್ಷಿ ಮಹಜರಿನ ಸಮಯದಲ್ಲಿ ಅಮಾನತ್ತುಪಡಿಸಿಕೊಂಡ ಮು.ಮಾ.1 ರ ಕೋಲನ್ನು ನೋಡಿ ಗುರುತಿಸಿರುತ್ತಾರೆ. ನಕ್ಷೆಯನ್ನು ಎಲ್ಲಿ ತಯಾರಿಸಿದ್ದರು ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

2. ಪೊಲೀಸರು ಗಲಾಟೆಯ ವಿಚಾರದ ಕುರಿತು ಮಹಜರನ್ನು ಜರುಗಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಮಹಜರಿನ ಕಾಲಕ್ಕೆ ಪೊಲೀಸರು ಸ್ಥಳದಲ್ಲಿ ನಕ್ಷೆಯನ್ನು ತಯಾರಿಸಿರುತ್ತಾರೆ

ದಿ: 23.07.2026

ಎಂದರೆ ಗೊತ್ತಿಲ್ಲ. ಪೊಲೀಸರಿಗೆ ಸ್ಥಳವನ್ನು ಮೃತ ಚಾಸಾ. 1 ರವರು ತೋರಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರು ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಆರ್.ಎಸ್. ವಕೀಲರಿಂದ:</u>**

3. ನನ್ನ ಸ್ವಂತ ಊರು ಚನ್ನಗಿರಿ ತಾಲ್ಲೂಕಿನ ಗಾಂಧಿನಗರ. ಪೊಲೀಸರ ಸೂಚನೆಯ ಮೇರೆಗೆ ನಾನು ಛಾಯಾಚಿತ್ರಕ್ಕೆ ನಿಂತಿರುತ್ತೇನೆ ಎಂದರೆ ಸರಿ. ಪೊಲಿಸರು ಸಹಿ ಮಾಡು ಎಂದು ಹೇಳಿದ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಮಹಜರಿಗೆ ಬಂದಿದ್ದೇವೆ ಸಹಿ ಮಾಡಿ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಮಹಜರಿನ ಸ್ಥಳದ ಚೆಕ್ಕುಬಂದಿ ಗೊತ್ತಿಲ್ಲ. ಮು.ಮಾ.1 ರ ಕೋಲು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಮು.ಮಾ.1 ರ ಕೋಲಿಗೆ ನನ್ನ ಸಹಿ ಪಡೆದಿಲ್ಲ ಎಂದರೆ ಸರಿ. ಯಾವ ವಿಚಾರದ ಕುರಿತು ಸಹಿ ಮಾಡು ಎಂದು ಹೇಳಿದರು ಎಂದು ನನಗೆ ಗೊತ್ತಿಲ್ಲ. ನಾನು ಮಹಜರಿನ ಕಾಲಕ್ಕೆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಸೂಚನೆಯ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನಗೆ ನೋಟೀಸನ್ನು ನೀಡಿಲ್ಲ. ಪೊಲೀಸರು ಸಹಿ ಮಾಡು ಎಂದು ಹೇಳಿದ ಮೇರೆಗೆ ಸಹಿ ಮಾಡಿದ್ದು, ಇತರೆ ವಿಚಾರಗಳ ಕುರಿತು ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ,**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ._